## ನಿಮ್ಮೊಡನೆ

# ಕೌಟುಂಬಿಕ ದೌರ್ಜನ್ಯಕ್ಕಿರಲಿ ಕಡಿವಾಣ

> ವಿವಾಹಿತೆಯರಲ್ಲಿ ಶೇ. 44ರಷ್ಟು ಮಂದಿ ಒಂದಲ್ಲ ಒಂದು ಬಗೆಯ ದೌರ್ಜನ್ಯಕ್ಕೆ ತುತ್ತಾಗಿದ್ದಾರೆ. ರಾಜ್ಯದಲ್ಲಿ 2019–21ನೇ ಸಾಲಿನ ಅಂಕಿ–ಅಂಶದಲ್ಲಿ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಗಣನೀಯವಾಗಿಯೇ ಹೆಚ್ಚಾಗಿದ್ದವು. 18ರಿಂದ 49ರ ವಯೋಮಾನದವರಲ್ಲಿ ಶೇ. 22ರಷ್ಟು ಮಹಿಳೆಯರು ಕೌಟುಂಬಿಕ ದೌರ್ಜನ್ಯದ ಪ್ರಕರಣಗಳಿಗೆ ತುತ್ತಾಗಿದ್ದಾರೆ.


ಈಶ್ವರ್

ಪ್ರತಿ ಐದು ಜನ ವಿವಾಹಿತರಲ್ಲಿ ಮೂರು ಜನ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಹೌಹಾರದಿರಿ, ಇದಕ್ಕೂ ಚಿಂತಾಜನಕ ವಿಷಯವೆಂದರೆ ದೂರು ಸಲ್ಲಿಸಲು ಮುಂದಾಗುವವರಲ್ಲಿ ಬಲು ಕಡಿಮೆ ಜನರಿದ್ದಾರೆ.

ಗಂಡನಿಂದ, ಅತ್ತೆ–ಮಾವನಿಂದ ಏಟು ತಿನ್ನುವವರು, ಕಡೆಗಣನೆಗೆ ಒಳಗಾಗಿ ಮಾನಸಿಕ ಹಿಂಸೆ ಅನುಭವಿಸುವವರು, ದಾಂಪತ್ಯದಲ್ಲಿಯೇ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುವವರು ಎಲ್ಲರೂ ಸಂಯಮದ ಮಿತಿ ಮೀರಿದ ನಂತರವೇ ದೂರು ಸಲ್ಲಿಸಲು ಮುಂದಾಗುತ್ತಾರೆ.

ಬಾಂಧವ್ಯವೆಂಬ ನಾಜೂಕಿನ ದಾರದ ಎಳೆಯಂತೆ ನೇತಾಡುವಾಗ, ಕಡಿದುಕೊಳ್ಳುವ ಹಂತದಲ್ಲಿದ್ದಾಗ ಮಹಿಳೆಯರು ಮಾತನಾಡಲು ಮುಂದಾಗುತ್ತಾರೆ. ಈ ವರ್ಷದ ಮೊದಲ ಮೂರು ತಿಂಗಳಲ್ಲಿಯೇ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಸಲ್ಲಿಸಲಾಗಿರುವ ದೂರುಗಳ ಸಂಖ್ಯೆ ಸಾವಿರ ದಾಟಿದೆ. ಮೊದಲ ಸ್ಥಾನದಲ್ಲಿ ಉತ್ತರಪ್ರದೇಶ ಇದ್ದರೆ, ಉಳಿದಂತೆ ದೆಹಲಿ, ಮಧ್ಯಪ್ರದೇಶ, ಬಿಹಾರ ಮತ್ತು ಹರಿಯಾಣ ರಾಜ್ಯಗಳು ನಂತರದ ಸ್ಥಾನದಲ್ಲಿವೆ. ಈ ವರ್ಷದ ಮೇ ತಿಂಗಳ ಹೊತ್ತಿಗೆ ಮೂರೂವರೆ ಸಾವಿರಕ್ಕೂ ಹೆಚ್ಚು ದೂರುಗಳು ದಾಖಲಾಗಿವೆ. ದೂರು ದಾಖಲಾಗುವುದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಈ ಪ್ರಕರಣಗಳು ಜರುಗುತ್ತಿವೆ ಎನ್ನುವುದು ಜಗಜ್ಜಾಹೀರು.

ಕರ್ನಾಟಕ ಈ ಪಟ್ಟಿಯಲ್ಲಿಲ್ಲ ಎಂದು ಸಮಾಧಾನ ಪಡುವಂತಿಲ್ಲ. ಅಲ್ಲಿ ದೂರು ಸಲ್ಲಿಸುವ ಜಾಗೃತಿ ಉಂಟಾಗಿದೆ. ನಮ್ಮಲ್ಲಿ ಇನ್ನೂ ಸಹಿಸುವ, ಸಂಯಮದ ಮಂತ್ರವೇ ಹೆಚ್ಚು. ಮಹಿಳೆಯರು ‘ತುಟಿ ಕಚ್ಚಿ’ ನಡೆಯುವುದನ್ನೇ ತಾಳಿದವಳು ಬಾಳಿಯಾಳು ಎಂದೆಲ್ಲ ಸಾಮಾಜಿಕ ಮತ್ತು ಸಾಂಸ್ಕೃತಿಕ ಒತ್ತಡ ಹೇರುತ್ತಾರೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಪ್ರಕಾರ ದೇಶದ ಪ್ರಗತಿಪರ ರಾಜ್ಯವೆಂದೇ ಹೆಸರಾಗಿರುವ ಕರ್ನಾಟಕವೂ ವಿವಾಹಿತೆಯರಿಗೆ ಸುರಕ್ಷಿತವಾಗಿ ಉಳಿದಿಲ್ಲ. ವಿವಾಹಿತೆಯರಲ್ಲಿ ಶೇ. 44ರಷ್ಟು ವಿವಾಹಿತೆಯರು ಒಂದಲ್ಲ ಒಂದು ಬಗೆಯ ದೌರ್ಜನ್ಯಕ್ಕೆ ತುತ್ತಾದವರೇ ಇದ್ದಾರೆ. ಕರ್ನಾಟಕದಲ್ಲಿಯೂ 2019–21ರ ಸಾಲಿನ ಅಂಕಿ ಅಂಶ ಗಮನಿಸಿದಾಗ ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳ ಸಂಖ್ಯೆ ಗಣನೀಯವಾಗಿಯೇ ಹೆಚ್ಚಾಗಿದ್ದವು. 18ರಿಂದ 49ರ ವಯೋಮಾನದ ಮಹಿಳೆಯರು ಶೇ. 22ರಷ್ಟು ಕೌಟುಂಬಿಕ ದೌರ್ಜನ್ಯದ ಪ್ರಕರಣಗಳಿಗೆ ಬಲಿಯಾಗಿದ್ದಾರೆ.

ಇದೊಂದು ಮುಖವಾದರೆ, ಇನ್ನೂ ಕೆಲವು ಪ್ರಕರಣಗಳಲ್ಲಿ ಈ ಕಾನೂನುಗಳನ್ನೇ ಪುರುಷರನ್ನು ಮಣಿಸುವ ಸಾಧನವೆಂಬಂತೆ ಬಳಸಿರುತ್ತಾರೆ. ಬಹುತೇಕ ಪ್ರಕರಣಗಳಲ್ಲಿ ದೌರ್ಜನ್ಯಗಳು ನಡೆದಿರುವುದು ಸತ್ಯವಾಗಿದ್ದರೂ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ‘ಬಜಾರಿ ಹೆಣ್ಮಗಳು ದೂರು ಸಲ್ಲಿಸಿದಳು’ ಎಂಬ ಕುಹಕವನ್ನೂ ಕೇಳಬೇಕಾಗುತ್ತದೆ.

ಔದ್ಯೋಗೀಕರಣ ಹಾಗೂ ಮುಕ್ತಮಾರುಕಟ್ಟೆಯ ನಂತರದ ಬದಲಾವಣೆಗಳಲ್ಲಿ ಮಹಿಳೆಯರು ಸ್ವತಂತ್ರವಾಗಿ, ಸ್ವಾವಲಂಬಿಗಳಾಗಿ ಬದುಕುವುದು ಸಾಧ್ಯವಾಯಿತು. ಆದರೆ ಇಂಥ ಮಹಿಳೆಯರೊಂದಿಗೆ ಪುರುಷರು ಬದುಕನ್ನು ಸಮನ್ವಯಗೊಳಿಸುವುದು ಸಾಧ್ಯವಾಗಲಿಲ್ಲ. ಈಗಲೂ ಪುರುಷಾಹಂಕಾರದ ಪ್ರತೀಕಗಳಾಗಿಯೇ ಈ ಶೋಷಣೆಗಳು ಜರುಗುತ್ತಿವೆ.

ಈ ವರ್ಷದ ಆರಂಭದಲ್ಲಿ ನ್ಯಾಯಮೂರ್ತಿ ಸಿದ್ದಪ್ಪ ಸುನಿಲ್ ದತ್ ಯಾದವ್ ಅವರು ‘ಕೌಟುಂಬಿಕ ದೌರ್ಜನ್ಯದ ಪ್ರಕರಣಗಳಲ್ಲಿ ದೂರು ದಾಖಲಿಸದವರ ಸಂಖ್ಯೆಯೇ ಹೆಚ್ಚಿದೆ. ಇಂಥ ಪ್ರಕರಣಗಳನ್ನು ದಾಖಲಿಸುವಾಗ, ವಿಚಾರಿಸುವಾಗ ಪೊಲೀಸ್ ಸಿಬ್ಬಂದಿ, ಕೋರ್ಟ್ ಸಿಬ್ಬಂದಿ ಸೂಕ್ಷ್ಮ ಮನಃಸ್ಥಿತಿಯವರಾಗಬೇಕು. ಅದಕ್ಕೆ ಅಗತ್ಯದ ತರಬೇತಿ ನೀಡುವುದು ಇಂದಿನ ತುರ್ತಾಗಿದೆ’ ಎಂದು ಅಭಿಪ್ರಾಯಪಟ್ಟಿದ್ದರು. ದೈಹಿಕ ಹಲ್ಲೆ ಅಥವಾ ವರದಕ್ಷಿಣೆ ಪೀಡನೆಗಳು, ಲೈಂಗಿಕ ಕಿರುಕುಳಗಳು ಮಾತ್ರ ಕೌಟುಂಬಿಕ ದೌರ್ಜನ್ಯದ ವ್ಯಾಪ್ತಿಗೆ ಬರುವುದಿಲ್ಲ. ಅವಗಣನೆ, ಕಡೆಗಣನೆ, ಹೀಯಾಳಿಕೆ, ಮಾನಸಿಕ ಕಿರುಕುಳಗಳೂ ಈ ವ್ಯಾಪ್ತಿಗೆ ಬರುತ್ತವೆ. ಇವೆಲ್ಲವೂ ಮಹಿಳೆಯರ ಸಾಮರ್ಥ್ಯವನ್ನು ಕುಂದಿಸುವಲ್ಲಿ ಬಲು ದೊಡ್ಡ ಪಾತ್ರವಹಿಸುತ್ತವೆ. ಕೌಟುಂಬಿಕ ದೌರ್ಜನ್ಯದ ಕುರಿತು ಪೊಲೀಸ್ ಮತ್ತು ಕೋರ್ಟ್ ಸಿಬ್ಬಂದಿಯ ಜೊತೆಗೆ ಶಿಕ್ಷಕರಿಗೂ ಮಕ್ಕಳಿಗೂ ತರಬೇತಿ ಆಗಬೇಕು.

ಆತ್ಮಗೌರವದ, ಭಯಮುಕ್ತ ಮತ್ತು ಹಿಂಸೆಮುಕ್ತ ವಾತಾವರಣವೇ ಕೌಟುಂಬಿಕ ದೌರ್ಜನ್ಯ 2005 ಕಾಯ್ದೆಯ ಉದ್ದೇಶವಾಗಿದೆ. ಮಹಿಳೆಯರು ಕಷ್ಟಸಹಿಷ್ಣುಗಳಾಗುವ ಸಾಮಾಜಿಕ ಹೇರಿಕೆಯಲ್ಲಿ ಹಿಂಸೆಯನ್ನು ಪೋಷಿಸುವ ಕೆಲಸವನ್ನು ಮಾಡಕೂಡದು. ಹಿಂಸೆಯ ವಿರುದ್ಧ ಧ್ವನಿ ಎತ್ತಬೇಕು. ಗಂಡ ಹೆಂಡಿರ ಜಗಳ, ಮನೆಯ ಕಿರಿಕಿರಿಗಳು ನಾಲ್ಕುಗೋಡೆಗಳಲ್ಲಿರಬೇಕು ಎಂಬ ಕಾಳಜಿಯಲ್ಲಿ ತಾವು ಹಿಂಸೆಯನ್ನು ಸಹಿಸಬಾರದು.

■ ರಶ್ಮಿ ಎಸ್.